ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉನಿ : ಸುಮಪ : 2018–19 : ದಿನಾಂಕ : 03–10–2018

# ಪತ್ರಿಕಾ ಆಮಂತ್ರಣ

**1.** ಕೃಷಿ ವಿಶ್ವವಿದ್ಯಾಲಯ 53 ನೆ ಸಂಸ್ಥಾಪನಾ ದಿನಾಚರಣೆ;
ಉದ್ಘಾಟನೆ:
ಎನ್.ಹೆಚ್. ಶಿವಶಂಕರ ರೆಡ್ಡಿ,
ಕೃಷಿ ಸಚಿವರು,

ಮುಖ್ಯ ಅತಿಥಿಗಳು:
ಡಾ: ಎನ್.ಸಿ. ಪಟೇಲ್,
ಕುಲಪತಿಗಳು, ಆನಂದ್ ಕೃಷಿ ವಿಶ್ವವಿದ್ಯಾನಿಲಯ, ಆನಂದ್, ಗುಜರಾತ್

ಅಧ್ಯಕ್ಷತೆ:
ಡಾ: ಎಸ್. ರಾಜೇಂದ್ರಪ್ರಸಾದ್,
ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.

ದಿನಾಂಕ: 04–10–2018, ಗುರುವಾರ, ಸಮಯ: ಬೆಳಿಗ್ಗೆ 10.00 ಗಂಟೆಗೆ
ಸ್ಥಳ: ಡಾ: ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ. ಬೆಂಗಳೂರು.

2. ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತದಿಂದ ಪಾದಚಾರಿ ಮೇಲು ಸೇತುವೆ ಉದ್ಘಾಟನೆ ಮತ್ತು ಎರಡನೇ ಆರು ಬೋಗಿಗಳ ರೈಲಿನ ಚಾಲನೆಗೆ ಹಸಿರು ನಿಶಾನೆ:

ಹೆಚ್.ಡಿ. ಕುಮಾರಸ್ವಾಮಿ, ಮುಖ್ಯ ಮಂತ್ರಿಗಳು.
ದಿನಾಂಕ: 04–10–2018 ಗುರುವಾರ ಸಮಯ: ಬೆಳಿಗ್ಗೆ 11–00 ಗಂಟೆಗೆ

ಸ್ಥಳ: ನಾಡಪ್ರಭು ಕೆಂಪೇಗೌಡ ಮೆಟ್ರೋ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು

3. ಕಾಶ್ಮೀರಿ ಯುವ ವಿನಿಮಯ ಕಾರ್ಯಕ್ರಮ:

ಉದ್ಘಾಟನೆ:
ಡಿ.ವಿ. ಸದಾನಂದ ಗೌಡ,
ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರು

ಮುಖ್ಯ ಅತಿಥಿ:
ಜಿ.ಟಿ. ದೇವೇಗೌಡ, ಉನ್ನತ ಶಿಕ್ಷಣ ಸಚಿವರು

ದಿನಾಂಕ: 04–10–2018 ಗುರುವಾರ ಮಧ್ಯಾಹ್ನ 1–00 ಗಂಟೆಗೆ
ಸ್ಥಳ: ಪ್ರೊ. ವೆಂಕಟಗಿರಿ ಗೌಡ ಆಡಿಟೋರಿಯಂ, ಜ್ಞಾನಭಾರತಿ ಆವರಣ, ಬೆಂಗಳೂರು

# ಪತ್ರಿಕಾ ಪ್ರಕಟಣೆ

ಸಂಖ್ಯೆ:1077/1177

## ಆನೇಕಲ್ ತಾಲ್ಲೂಕಿನಲ್ಲಿ ಖಾಲಿ ಇರುವ ಅಂಗನವಾಡಿ ಕೇಂದ್ರ ಗೌರವ ಕಾರ್ಯಕರ್ತೆಯರ ಮತ್ತು ಸಹಾಯಕರಿಯರ ಹುದ್ದೆಗೆ ಅರ್ಜಿ ಆಹ್ವಾನ

ಬೆಂಗಳೂರು, ಅಕ್ಟೋಬರ್ 3, 2018 (ಕರ್ನಾಟಕ ವಾರ್ತೆ)

ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಆನೇಕಲ್ ತಾಲ್ಲೂಕು, ಇಲ್ಲಿ ನಿವೃತ್ತಿ ಮತ್ತು ರಾಜೀನಾಮೆಯಿಂದ ಖಾಲಿ ಇರುವ ಗೌರವ ಕಾರ್ಯಕರ್ತೆ ಮತ್ತು ಸಹಾಯಕಿಯರ ಗೌರವ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

09 ಅಂಗನವಾಡಿ ಕೇಂದ್ರಗಳ ಗೌರವ ಕಾರ್ಯಕರ್ತೆ ಹುದ್ದೆಗಳಿಗೆ ಮತ್ತು 32 ಅಂಗನವಾಡಿ ಕೇಂದ್ರಗಳ ಸಹಾಯಕಿಯರ ಹುದ್ದೆಗಳಿಗೆ ಪ್ರಕಟಣೆ ಹೊರಡಿಸಿದ್ದು, ಆಸಕ್ತಿಯುಳ್ಳ 18 ರಿಂದ 35 ವರ್ಷ ವಯಸ್ಸಿನ ಸ್ಥಳೀಯ ಗ್ರಾಮದ ಮಹಿಳೆಯರು ಮಾತ್ರ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಅಕ್ಟೋಬರ್ 25, 2018. ಹೆಚ್ಚಿನ ಮಾಹಿತಿಗೆ ಹಾಗೂ ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ: www.anganwadirecruit.kar.nic.in ವೀಕ್ಷಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಧನ ಸಹಾಯ

**ಬೆಂಗಳೂರು, ಅಕ್ಟೋಬರ್ 3, 2018 (ಕರ್ನಾಟಕ ವಾರ್ತೆ)**

**2018-19 ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಧನ ಸಹಾಯ ನೀಡುವ ಸಲುವಾಗಿ (ಹಿಂದಿನ ವರ್ಷ/ಸೆಮಿಸ್ಟರ್‌ನಲ್ಲಿ 50% ಅಂಕ ಪಡೆದು ಪಾಸಾಗಿರಬೇಕು) ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.**

**ಅರ್ಹ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಆಯಾ ವಲಯ/ತಾಲ್ಲೂಕಿನ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಭರ್ತಿಮಾಡಿದ ಅರ್ಜಿಗಳನ್ನು ದಿನಾಂಕ 31-10-2018 ಒಳಗಾಗಿ ಸಲ್ಲಿಸಬಹುದಾಗಿದೆ.**

**ಪದವಿಪೂರ್ವ ಕಾಲೇಜುಗಳು ಹಾಗೂ ಮೇಲ್ಪಟ್ಟ ವಿದ್ಯಾಸಂಸ್ಥೆಗಳ ಉಪನ್ಯಾಸಕರುಗಳು ಮತ್ತು ಪ್ರಾಚಾರ್ಯರು ಅವರ ಮೇಲಾಧಿಕಾರಿಗಳ ಮುಖಾಂತರ ದಿನಾಂಕ 31-10-2018 ರೊಳಗೆ ಅರ್ಜಿಗಳನ್ನು ನಿಧಿಗಳ ಕಛೇರಿಗೆ ನೇರವಾಗಿ ಸಲ್ಲಿಸಬೇಕು. ಅರ್ಜಿ/ನಮೂನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ್ಜಾಲದಿಂದ www.schooleducation.kar.nic.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.**

## ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಮತ್ತು ರಸ್ತೆ ಸುರಕ್ಷತೆ ಸಮಿತಿ ಸಭೆ

**ಬೆಂಗಳೂರು, ಅಕ್ಟೋಬರ್ 3, 2018 (ಕರ್ನಾಟಕ ವಾರ್ತೆ)**

**ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆ ಮತ್ತು ರಸ್ತೆ ಸುರಕ್ಷತೆ ಸಮಿತಿ ಸಭೆಯನ್ನು ಅಕ್ಟೋಬರ್ 5, 2018 ರಂದು ಬೆಳಿಗ್ಗೆ 11-00 ಗಂಟೆಗೆ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕಂದಾಯ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು ಇಲ್ಲಿ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.**

## Bengaluru(Urban) Regional Transport Authority Road Safety meeting

Bengaluru, 3, October 3, 2018

Regional Transport Authority, Bengaluru(Urban) and Road Safety meeting is schedule to be held on October 5, 2018 at 11.00 a.m. at Kandaya Bhavana, Office of the Deputy Commissioner (Urban), Kempegowda Road, Bengaluru says official press release.

## ಬೆಂಗಳೂರು ಜಲಮಂಡಲಿ: ಅಕ್ಟೋಬರ್ 04 ರಂದು ಸಕಾನಿಅ(ಉತ್ತರ-1) ಉಪವಿಭಾಗದಲ್ಲಿ ನೀರಿನ ಅದಾಲತ್

ಬೆಂಗಳೂರು ಜಲಮಂಡಲಿಯ 04.10.2018 ರಂದು ಸಕಾನಿಅ(ಉತ್ತರ-1) ಉಪವಿಭಾಗದಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುತ್ತದೆ.

ದಿನಾಂಕ: 04.10.2018 ಸಕಾನಿಅ(ಉತ್ತರ-1) ಉಪವಿಭಾಗ ವ್ಯಾಪ್ತಿಗೆ ಬರುವ ಎಂಇಐ ಲೇಔಟ್, ಸೋಲದೇವನ ಹಳ್ಳಿ, ಬಾಹುಬಲಿನಗರ ಸೇವಾಠಾಣೆಗಳಿಗೆ ಸಂಬಂಧಿಸಿದ ವಿವಾದಗಳನ್ನು ನಂ.1, ಎಂಇಐ ಲೇಔಟ್, 7ನೇ ಮುಖ್ಯ ರಸ್ತೆ, ಬೆಂಗಳೂರು-73 ಇಲ್ಲಿನ ಸ.ಕಾ.ನಿ.ಅ(ಉತ್ತರ-1) ಉಪವಿಭಾಗ ಕಚೇರಿಯಲ್ಲಿ ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯನಿರ್ವಾಹಕ ಅಭಿಯಂತರರು (ವಾಯುವ್ಯ-2): 23311337. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ-1) ಉಪವಿಭಾಗ: 28371048.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರುನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ-22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ: 8762228888 ಗೆ ಸಂಪರ್ಕಿಸಬಹುದಾಗಿದೆ.

## BWSSB: Water Adalath in AEE(North-1) sub division on October 4th

BWSSB water Adalath is held on 04.10.2018 in AEE(North-1) sub division from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues.

The disputes of consumers of MEI Layout, Soladevanahalli, Bhahubalinagar, service station coming under AEE(North-1) sub division, will be discussed in detail & problems will be settled in the office of the Assistant Executive Engineer (North-1) sub division, No.1, MEI layout,7th Main, Bangalore-73.

Details regarding the adalath can be obtained by the office of EE (North West-2) :23311337, or office of AEE (North-1) 28371048.

For any problems regarding the water supply and all, publics can contact 24x7 call centre:22238888 helpline number:1916 & whats app no: 8762228888

## ಎಸಿಬಿ ದಾಳಿ

**ಬೆಂಗಳೂರು, ಅಕ್ಟೋಬರ್ 3, 2018 (ಕರ್ನಾಟಕ ವಾರ್ತೆ)**

ಕಾವಳಕಟ್ಟೆ ಪೋಸ್ಟ್, ಬಂಟ್ವಾಳ ತಾಲೂಕು ದಕ್ಷಿಣ ಕನ್ನಡ ಜಿಲ್ಲೆ ನಿವಾಸಿಯು ಹಾಗೂ ಬಯೋಗ್ಯಾಸ್ ಟರ್ನ್‌ಕೀ ಏಜೆನ್ಸಿಯನ್ನು ಹೊಂದಿರುವ ಫಿರ್ಯಾದುದಾರರು ಬಯೋಗ್ಯಾಸ್ ಸ್ಥಾವರಗಳ ನಿರ್ಮಾಣದ ಸಬ್ಸಿಡಿ ಹಣ ಬಿಡುಗಡೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಶ್ರೀ.ನಾಗೇಶ್, ಜಿಲ್ಲಾ ಪಂಚಾಯತ್ ಸಮಗ್ರ ಗ್ರಾಮೀಣ ಇಂಧನ ಯೋಜನೆಯ ಇಂಜಿನಿಯರ್ ರವರು ಅರ್ಜಿದಾರರ ಬಯೋಗ್ಯಾಸ್ ಸ್ಥಾವರಗಳ ನಿರ್ಮಾಣದ ಸಬ್ಸಿಡಿ ಹಣ ಬಿಡುಗಡೆ ಮಾಡಲು ರೂ.30,000/–ಗಳ ಲಂಚದ ಹಣಕ್ಕೆ ಬೇಡಿಕೆಯಿಟ್ಟಿರುತ್ತಾರೆ.

ಈ ದಿನ ದಿನಾಂಕ:03/10/2018 ರಂದು ಶ್ರೀ.ನಾಗೇಶ್ ರವರು ಫಿರ್ಯಾದುದಾರರಿಂದ ರೂ.30,000/– ಗಳ ಲಂಚದ ಹಣ ಸ್ವೀಕರಿಸುವ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಅಧಿಕಾರಿಗಳು ನಡೆಸಿದ ಕಾರ್ಯಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ತನಿಖೆ ಮುಂದುವರಿದಿದೆ ಎಂದು ಪ್ರಕಟಣೆ ತಿಳಿಸಿದೆ.

# ACB Raid

**Bengaluru, October 3 (Karnataka Information)**

A resident of Kavalabettu Post, Bantwala Taluk, Dakshina kannada District and owner of bio gas turn key agency had sought to release the subsidy amount for installation of the bio gas plants. Sri Nagesh, Zilla Panchayath Integrated Rural Energy Programme Project Engineer had demanded bribe of Rs.30,000/- to do the same.

On 03/10/2018 the officials of Dakshina kannada, Anti Corruption Bureau PS have trapped and arrested Sri.Nagesh while accepting the bribe amount of Rs.30,000/- from the complainant. The bribe amount has been seized. The case is under investigation says official press release.